Com.OS 15/25 PW-1

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 11.03.2026:**

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಪ್ರತಿವಾದಿಗೆ ನಾವು 20ಲಕ್ಷ ರೂಪಾಯಿ ಟರ್ಮ್ ಲೋನ್ ಕೊಟ್ಟಿರುತ್ತೇವೆ, ಒಡಿ ಹಣ 5ಲಕ್ಷ ರೂಪಾಯಿ. 13-5-22ರಂದು 20ಲಕ್ಷ ಕೊಟ್ಟಿರುತ್ತೇವೆ. ಒಡಿ 24-7-23ರಂದು ಕೊಟ್ಟಿರುತ್ತೇವೆ. 20ಲಕ್ಷ ರೂ ಹಣವನ್ನು ಪೂರ್ತ ಅವರ ಖಾತೆಗೆ ಹಾಕಿದ್ದೀರಾ ಎಂದರೆ ಸಾಕ್ಷಿಯು 20ಲಕ್ಷ ರೂಪಾಯಿ ಅವರ ವ್ಯವಹಾರದ ಬಂಡವಾಳಕ್ಕೆ ಅಂದರೆ ಮೆಷಿನರಿ ಖರೀದಿಸಲು ಇತ್ಯಾದಿ ನೀಡಿರುವುದು ಎನ್ನುತ್ತಾರೆ. ಟರ್ಮ್ ಲೋನ್ 20ಲಕ್ಷ ರೂಪಾಯಿ ಹಣವನ್ನು 84 ಕಂತುಗಳಲ್ಲಿ ಪಾವತಿಸಬೇಕಾಗಿರುತ್ತದೆ ಸಾಕ್ಷಿ ಮುಂದುವರೆದು 84 ಕಂತುಗಳಲ್ಲಿ ಮೊದಲ 2 ಕಂತುಗಳಲ್ಲಿ ಇಎಂಐ ಕಟ್ಟಬೇಕಾಗಿಲ್ಲ, 3ನೇ ಕಂತಿನಿಂದ ಇಎಂಐ ಕಟ್ಟಬೇಕಾಗಿರುತ್ತದೆ ಎನ್ನುತ್ತಾರೆ. ಈ ವಿಚಾರವನ್ನು ನಮ್ಮ ವಾದಪತ್ರದಲ್ಲಿ ಕಾಣಿಸಿರುತ್ತೇವೆ. ಈವಿಚಾರವನ್ನು ವಾದಪತ್ರದಲ್ಲಿಕಾಣಿಸಿಲ್ಲ ಎಂದರೆ ಸರಿಯಲ್ಲ. ಒಡಿ ಸಾಲಕ್ಕೆ ಶೇಃ9.55ಬಡ್ಡಿ ಇರುತ್ತದೆ, ಮತ್ತು 20ಲಕ್ಷಕ್ಕೆ ಶೇಕಡ 11.50 ಬಡ್ಡಿ ಇರುತ್ತದೆ. ಆರ್ ಬಿ ಐ ಮಾರ್ಗಸೂಚಿಯಂತೆ ನಾವು ಬಡ್ಡಿಯನ್ನು ವಿಧಿಸಿಲ್ಲ ಎಂದರೆ ಸರಿಯಲ್ಲ. ಒಡಿ ಸಾಲಕ್ಕೆ ನಾವು ಆರ್ ಬಿ ಐ ಮಾರ್ಗಸೂಚಿಗಿಂತ ಜಾಸ್ತಿ ಹಾಕಿರುತ್ತೇವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯ ಕೋಡಿದ್ದರಿಂದ ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**